ಶ್ರೀ ಬಿ. ಜಿ. ಬನಕಾರ್ —ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಪಕ್ಕದಲ್ಲಿ ಜನರು ಬೇಸಿಗೆಯಲ್ಲಿ ಬಿಸಿಲಿನಲ್ಲಿ ಮತ್ತು ಮಳೆಗಾಲದಲ್ಲಿ ಮಳೆಯಲ್ಲಿ ನಿಂತು ಬಸ್‌ನ್ನು ಹತ್ತಬೇಕಾಗುತ್ತದೆ ಎನ್ನುವುದು ತಮಗೆ ತಿಳಿದಿದೆ.....

MR. DEPUTY SPEAKER.—It is outside the scope of the question.

SRI B. G. BANAKAR.—There is nothing wrong if I put this question in public interest.

MR. DEPUTY SPEAKER —Public interest is there but it must be within the scope of the question. If it is outside the scope, I shall not be justified in allowing it and it will be a great embarrassment to the Hon. Minister because he will not have the necessary information.

ಯಡವಾಣಿ ಗ್ರಾಮದಲ್ಲಿನ ವಿದ್ಯಾವಂತ ನಿರುದ್ಯೋಗಿಗಳು

820. ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿಸಿಐ) ಪಿ. ಎಂ.. ಘಾಡಿ (ಹಳಿಯಾಳ್) ಪಿ. ಪಿ. ಹೆಗಡೆ (ಚಿಕ್ಕೋಡಿ), ಜೆ. ಎಚ್. ಕಬಾಡೆ (ಬಳ್ಳಾಳ್ಳಿ) ಎಂ.ಬಿ. ರಾಮಸ್ವಾಮಿ (ಅನೇಕರ್).—ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಯಡವಾಣಿ ಗ್ರಾಮದ ವಿದ್ಯಾವಂತ ನಿರುದ್ಯೋಗಿ ರೈತರಿಗೆ ವ್ಯವಸಾಯ ಇಲಾಖೆಯವರು ವ್ಯವಸಾಯ ಕಾಲೋನಿ ಆರಂಭಿಸಿ ಅವರಿಗೆ ಜಮೀನಿನ ಹಕ್ಕು, ಮನೆಯ ಮೇಲಿನ ಹಕ್ಕು ಹಾಗೂ ಮನೆ ಕಟ್ಟಿಕೊಳ್ಳಲು ಅದೇಶ ಮುಂತಾದ ವನ್ನು 1942ರಲ್ಲಿ ಕೊಟ್ಟಿದ್ದರೂ ಅದನ್ನು ಕಾರ್ಯರೂಪಕ್ಕೆ ತರದಿರಲು ಕಾರಣವೇನು ;

(ಆ) ಈ ರೈತರಿಗೆ ಕರಾರಾದ ಬಗ್ಗೆ ನೋಟೀನು ಮುಂತಾದವುಗಳನ್ನು ಕೊಡದೆ ಪಂಚಾಯಿತಿಯವರು ಹನ್ನೆರಡು ವರ್ಷಗಳ ಕಂದಾಯವನ್ನು ಲೀಸ್ ಹಣದಿಂದ ನೇರವಾಗಿ ಒಂದೇ ಕಂತಿನಲ್ಲಿ ತೆಗೆದುಕೊಳ್ಳಲು ಕಾರಣವೇನು ;

(ಇ) ಹೀಗೆ ಹಿಡಿದಿರುವ ಹಣಕ್ಕೆ ರಶೀತಿಯನ್ನು ರೈತರಿಗೆ ಕೊಡದಿರಲು ಕಾರಣವೇನು ?

ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು).—

(ಅ) ಸರ್ಕಾರದ ಆಜ್ಞೆ ನಂ. ಎ.ಎಫ್. 292 ಎ.ಎಂ.ಎಸ್, 67 ದಿನಾಂಕ 5-5-1971ರ ಪ್ರಕಾರ ಯಾರು ಷರತ್ತನ್ನು ಪಾಲಿಸಿದ್ದಾರೋ ಅಂಥ ಕಾಲೋನಿಷ್ಟರಿಗೆ ಜಮೀನಿನ ಹಕ್ಕನ್ನು ಖಾಯಂಗೊಳಿಸಲು ರೆವಿನ್ಯೂ ಇಲಾಖೆಗೆ 15-3-1975ರಲ್ಲಿ ಆದೇಶವನ್ನು ನೀಡಲಾಗಿತ್ತು ಆದನ್ನು ಪರಿಶೀಲಿಸುವಷ್ಟರಲ್ಲಿ ಕೆಲವು ಕಾಲೋನಿಷ್ಟರು ತಮಗೆ ಜಮೀನು ಹಂಚಿಕೆ ವಿಧಾನದಲ್ಲಿ ಅನ್ಯಾಯ ವೆಸಗಿದೆಯೆಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದರ ಮೇರೆ ಅದನ್ನು ಪರಿಶೀಲಿಸುವುದಕ್ಕಾಗಿ ಹಕ್ಕನ್ನು ಖಾಯಂ ಗೊಳಿಸುವುದನ್ನು ನಿಧಾನಕ್ಕೆ ತಡೆಹಿಡಿಯಲಾಗಿದೆ

(ಆ) ಮತ್ತು (ಇ) ಕಾಲೋನಿಯು ಯಡವಾಣಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರಿದ್ದರಿಂದ ಗ್ರಾಮ ಪಂಚಾಯಿತಿಯವರು 1964-65 ರಿಂದ 1974-75ರ ವರೆಗೆ ಅಗತಕ್ಕ ಮನೆ ಕಂದಾಯವನ್ನು ಕಾಲೋನಿಷ್ಟರಿಗೆ ನೋಟೀಸುಗಳನ್ನು ಜಾರಿಮಾಡಿ ವಸೂಲಿ ಮಾಡಿರುತ್ತಾರೆ. ಯಾರು ದುಡ್ಡನ್ನು ಕೊಟ್ಟಿರುತ್ತಾರೋ ಅಂಥವರಿಗೆ ರಶೀತಿಗಳನ್ನು ಕೊಟ್ಟಿರುತ್ತಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಒಂದು ನಿರುದ್ಯೋಗ ಯೋಜನೆಯಲ್ಲಿ ಹಿಂದೆ ದಿವಾನರಾಗಿದ್ದ ಮಿರ್ಜಾರವರು ಕೆಲವು ಕಾಲೋನಿಗಳನ್ನು ಸ್ಥಾಪನೆ ಮಾಡಿದ್ದರು. ಅದರಲ್ಲಿ 6 ವರ್ಷಗಳಲ್ಲಿ ಹಕ್ಕು ನೀಡಬೇಕು ಎಂದು ನಿಯಮವಿದೆ. ಆದರೆ 30-40 ವರ್ಷವಾದರೂ

ಹಕ್ಕನ್ನು ಕೊಟ್ಟಿಲ್ಲ. ಸರ್ಕಾರದ ಆಜ್ಞೆ ನಂ. ಎ. ಎಫ್. 292 ಎ. ಎಂ. ಎಸ್, 67 ದಿನಾಂಕ 5-5-1971ರ ಪ್ರಕಾರ ಯಾರು ಷರತ್ತುಗಳನ್ನು ಪಾಲಿಸಿದ್ದಾರೋ ಅವರಿಗೆ ಹಕ್ಕನ್ನು ಕೊಡುವುದರಲ್ಲಿ ತಡೆ ಏಕೆ ಸ್ವಾಮಿ ? ಅವರಿಗೂ ಜಾಗ್ರತೆ ಹಕ್ಕನ್ನು ಕೊಡಿಸುತ್ತೀರಾ ?

† ಶ್ರೀ ಎನ್. ಚಿಕ್ಕೇಗೌಡ.—ಸರ್ಕಾರದ ಹುಕುಂ ಏನಿದೆ ಅದನ್ನು ಸೂಚಿಸಿ, ಅದರ ಪ್ರಕಾರ ಹಕ್ಕನ್ನು ಕೊಡಬೇಕು ಎಂದು ನಾವು ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆ ಕೊಟ್ಟಿದ್ದೇವೆ. ಕೊಟ್ಟ ನಂತರ ಕೆಲವರಿಂದ ಅನ್ಯಾಯವಾಗಿದೆ, ಷರತ್ತು ಪ್ರಕಾರ ನಡೆದಿಲ್ಲ, ಆದುದರಿಂದ ಇದನ್ನು ಪುನರ್ಪರಿಶೀಲನೆ ಮಾಡಬೇಕು ಎಂದು ಅರ್ಜಿ ಬಂದ ಮೇರೆ 1971ರಲ್ಲಿ ಸರ್ಕಾರದ ಹುಕುಂ ಏನು ಆಗಿತ್ತು ಅದನ್ನು ತಡೆಹಿಡಿದಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಇದನ್ನು ಲೀಜ್ ಪ್ರಕಾರ ಕೊಟ್ಟಿರುವುದರಿಂದ ಸರ್ಕಾರಕ್ಕೆ ಬರತಕ್ಕಂಥಾ 5 ಲಕ್ಷ ರೂಪಾಯಿ ನಷ್ಟವಾಗುತ್ತದೆ, ಉಳುವವನಿಗೆ ಭೂಮಿ ಎಂದು ಭೂ ಶಾಸನ ಇರುವುದರಿಂದ ಲೀಜ್ ಮಾಡತಕ್ಕವರಿಗೆ ಹಕ್ಕನ್ನು ಕೊಡುತ್ತೀರಾ ವಾಗ ಅವರು ಈ ಪರ್ಮನೆಂಟ್ ಲೀಜೀಸ್ ಆಗಿರುವುದರಿಂದ ಇದನ್ನು ಪರಿಶೀಲನೆ ಮಾಡಿ ಜಾಗ್ರತೆ ಯಾಗಿ ಅವರಿಗೆ ಹಕ್ಕನ್ನು ಕೊಡುವಂತೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಶರತ್ತಿನ ಪ್ರಕಾರ ಕಲವು ಉಲ್ಲಂಘನೆಯಾಗಿದೆ. ಉಳುವವನೇ ಭೂಮಿಯ ಒಡೆಯ ಎಂದು ಸರ್ಕಾರದ ನೀತಿ ಇದೆ. ಅಲ್ಲಿ ಉಪತಕ್ಕವರು ಕೆಲವರು ಇರಲಿಲ್ಲ ಶರತ್ತಿನ ಪ್ರಕಾರ ಅವರು ಇಷ್ಟು ದಿವಸ ಅಲ್ಲಿ ಇರಬೇಕು ಎಂದು ಇದೆ. ಆದ್ದರಿಂದ ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಿ ವಿಚಾರಣೆ ತಿಳಿದುಕೊಂಡು ತಂದನಂತರ ಸರ್ಕಾರದವರು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಶ್ರೀ ಜೆ. ಎಲ್. ಕಟಾಡಿ.—ಜಮೀನು ಹಂಚಿಕೆ ವಿಚಾರದಲ್ಲಿ ಅನ್ಯಾಯವಾಗಿದೆ ಎಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದರ ಮೇಲೆ ಅವನ್ನು ಪರಿಶೀಲಿಸುವುದಕ್ಕಾಗಿ ಹಕ್ಕನ್ನು ಬಾಯಂ ಗೊಳಿಸುವುದನ್ನು ಸದನ್ಯಕ್ಕೆ ತಡೆಹಿಡಿಯಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಅದನ್ನು ಯಾವ್ದೇತಿ ನಿತ್ಯಾರ್ಥ ಮಾಡುತ್ತೀರಾ ಮತ್ತು ಅದನ್ನು ಎಂದು ತಡೆಹಿಡಿಯಲಾಗಿದೆ ?

ಶ್ರೀ ಎನ್. ಚಿಕ್ಕೇಗೌಡ.—ನವೆಂಬರ್ 1975ರಲ್ಲಿ ಅದನ್ನು ತಡೆ ಹಿಡಿಯಲಾಗಿದೆ. ಆದಷ್ಟು ಜಾಗ್ರತೆ ಸ್ಥಳ ಪರಿಶೀಲನೆ ಮಾಡಿ ಆ ಬಗ್ಗೆ ಜನಗಳಿಂದ ವಿಚಾರಗಳನ್ನು ತಿಳಿದುಕೊಂಡು ತೀರ್ಮಾನ ಮಾಡುತ್ತೇವೆ.

ಶ್ರೀ ವಿ. ಎಂ. ಘಾಡಿ.—ಪ್ರೊಸೆಸ್ ಟ್ಯಾಕ್ಸ್ ಕಲೆಕ್ಟ್ ಮಾಡಬೇಕಾದರೆ ಪಂಚಾಯತಿಯವರು ಕಲೆಕ್ಟ್ ಮಾಡಿದ್ದಾರೆ ಎಂದು ತಾವು ಹೇಳಿದ್ದೀರಾ, ಆದರೆ ಅವರು ಲೆವಿ ಹಣವನ್ನು ಜುಲುಮಿನಿಂದ ಕಲೆಕ್ಟ್ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಆದು ತಮ್ಮ ಗಮನಕ್ಕೆ ಬಂದಿದ್ದರೆ ಅದರ ಬಗ್ಗೆ ಯಾವ ಕ್ರಮತೆಗೆದುಕೊಂಡಿದ್ದೀರಿ ?

SRI N. CHIKKEGOWDA.—Because it comes under the Yadavani village panchayat they have collected that tax.

SRI V. M. GADI.—Do you say that they have not collected the levy amount.

SRI N. CHIKKEGOWDA.—I cannot say it. As per the information received Yadavani village panchat has collected house tax from the colonists and recipt have been given to such persons.

ಶ್ರೀ ಜಯಪ್ರಕಾಶ್‌ನಾರಾಯಣ್.—ಅವರು ಕೊಟ್ಟಂತಹ ಲೆವಿಯಲ್ಲಿ 12ವರ್ಷದ ಕಂದಾಯವನ್ನು ವಸೂಲು ಮಾಡಿದ್ದಾರೆ. ಅದರ ಹಕ್ಕು ವ್ಯವಸಾಯ ಇಲಾಖೆಯವರಿಗೆ ಸೇರಿದ್ದು. ಅವರು ಕಂದಾಯವನ್ನು ಮನೆಗಾಗಲೀ ಜಮೀನಿಗಾಗಲೀ ಹಾಕುತ್ತಾ ಇಲ್ಲ. ಅವರು ನೋಟೀಸ್ ಸಹ ಕೊಟ್ಟಿಲ್ಲ. ಪಂಚಾಯಿತಿಯವರು ದುಂಡಾವರ್ತಿಯಿಂದ ಮಾಡಿರತಕ್ಕ ನೀತಿ ಎಂದು ಹೇಳಿ ಬಹುದು. ಅವರು ವ್ಯವಸಾಯಗಾರರಾಗಿದ್ದಾರೆ ಎಂದು ವ್ಯವಸಾಯ ಇಲಾಖೆಯವರು

ಸಿಫಾರಸ್ಸು ಮಾಡಿದ್ದಾರೆ. ಡಿವಿಜನರ್ ಕಮಿಷನರು ಸಿಫಾರಸು ಮಾಡಿದ್ದಾರೆ. ಡೆಪ್ಯುಟಿ ಕಮಿಷನರು ಸಿಫಾರಸ್ಸು ಮಾಡಿದ್ದಾರೆ.ಆದರೂ ನಹ ಲಿದು ಏನೂ ತೀರ್ಮಾನ ಆಗದೆ ನಿಂತಿದೆ. ಅದ್ದರಿಂದ ಇದನ್ನು ತಾವು ಜಾಗ್ರತೆ ಹೋಗಿ ಪರಿಶೀಲನೆ ಮಾಡಿ ನರ್ಕಾರದವರು ಹಾಕಿರತಕ್ಕ ಶರತ್ತುಗಳಿಗೆ ಬದ್ಧರಾಗಿ ಕೆಲನ ಮಾಡಿದ್ದಾರೆ ಅಂಥವರಿಗೆ ತಕ್ಷಣ ಹಕ್ಕನ್ನು ಕೊಡಿನಿ ತಕರಾರು ಇದ್ದರೆ ಅದನ್ನು ವಿಚಾರಿನುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಅಲ್ಲಿ ನ್ಥಳ ಪರಿಶೀಲನೆ ಮಾಡಿ ವಿಚಾರವನ್ನು ತಿಳಿದುಕೊಂಡ ತೀರ್ಮಾನ ತಗೆದುಕೊಳ್ಳುತ್ತೇವೆ.

DEPUTY SPEAKER.—I put Question number 788

Reservation of Seats to S.C./S.T. in St. Joseph's College of Arts and Science Bangalore.

788 SRI J.P. SARWESH (Sedam).—Will the Minister for Education be pleased to state ;

(*a*) whether the St. Joseph's College of Arts and Science Bangalore is a Grant-in-Aid College : if so, what is the amount of grant given to the College during the last year.

(*b*) whether the Government is aware that this college is not reserving 18 percent of seats for S.Cs. and S,Ts, as required by the Government Order ;

(*c*) the number of applications received from S,C. and S.T, students seeking admission in various classes and the number admitted during the last 3 years ;

(*d*) whether there is an admission Committee for admitting students ? if so, who is the Government nominee on this Committee :

(*e*) whether the Government is aware of the irregularities indulged in by the College in appointing non-qualified people to teach and making promotions violating Government rules etc.

(*f*) whether Government is aware that this college is collecting highest fees from students in the State ?

SRI M. MALLIKARJUNASWAMY (Minister for Education).—

(*a*) Yes. For the year 1974-75, Rs. 5,53,369.86P

(*b*) Yes.

(*c*) The No. of applications received is not known. Admissions made are as follows:

1973	...	22
1974	...	36
1975	...	20